ನೀಡುವಲ್ಲಿ ಮತ್ತು ಅಸಮರ್ಪಕ ಪ್ರಶ್ನೆ ಪತ್ರಿಕೆಗಳಿಂದಾಗಿ ಆಗಿರುವ ಅವ್ಯವಸ್ಥೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) —

(ಅ) ಫಲಿತಾಂಶ ಪ್ರಕಟನೆ ಮತ್ತು ಅಂಕಪಟ್ಟಿ ನೀಡುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಒಂದೇ ಒಂದು ಸಂಸ್ಥೆಯಲ್ಲಿ ಮಾತ್ರ ಗೊತ್ತುಪಡಿಸಿದ ಪಠ್ಯಪುಸ್ತಕ ಬೋಧಿಸಲ್ಪಡದಿದ್ದರಿಂದ ಕೇವಲ ಇಬ್ಬರು ವಿದ್ಯಾರ್ಥಿಗಳಿಗೆ ಅನಾನುಕೂಲವಾದುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಈ ವಿಷಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

## ಹೊಸನಗರ ತಾಲ್ಲೂಕು ವ್ಯವಸಾಯ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಿಂದ ಹಂಚಲಾದ ನೇಗಿಲು, ಗುದ್ದಲಿ ಮಂತಾದುವುಗಳ ಹಂಚಿಕೆ ಬಗ್ಗೆ

೨೧೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಹೊಸನಗರ ತಾಲ್ಲೂಕು ವ್ಯವಸಾಯ ಇಲಾಖೆಯಿಂದ ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನಲ್ಲಿ ಹಂಚಲಾದ ನೇಗಿಲು, ಗುದ್ದಲಿ, ಸ್ಪೇಯರ್ ಮತ್ತು ಪಿಕಾಸಿಗಳನ್ನು ಯಾವ ಧಾರಣೆಗೆ ಕೊಂಡು ಹಂಚಲಾಗಿದೆ.

(ಆ) ಸದರಿ ಸಾಮಾನುಗಳು ಪಡೆದವರ ಬಳಿ ಇವೆಯೆ.

(ಇ) ಇದರ ಬಗ್ಗೆ ತನಿಖೆ ನಡೆಸುವಂತೆ ಬರೆದ ಅರ್ಜಿಗಳ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ?

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—

(ಅ) ವಿಶೇಷ ಘಟಕ ಯೋಜನೆಯಲ್ಲಿ ಹೊಸನಗರ ತಾಲ್ಲೂಕಿನಲ್ಲಿ ೧೯೮೨–೮೩ರಲ್ಲಿ ಈ ಕೆಳಕಂಡ ಕೃಷಿ ಉಪಕರಣಗಳನ್ನು ಕೊಂಡು ಹಂಚಲಾಗಿದೆ.

| | | |
|---|---|---|
| (೧) | ನೇಗಿಲು ಒಂದಕ್ಕೆ | ೧೫೦–೦೦ ರೂಪಾಯಿಗಳು |
| (೨) | ಗುದ್ದಲಿ ಒಂದಕ್ಕೆ | ೩೧–೫೦ ,, |
| (೩) | ಸ್ಪೇಯರ್ ಒಂದಕ್ಕೆ | ೩೬೪–೬೫ ,, |
| (೪) | ಪಿಕಾಸಿ ಒಂದಕ್ಕೆ | ೩೭–೦೦ ,, |

(ಆ) ಹಂಚಿರುವ ಉಪಕರಣಗಳು ಪಡೆದವರ ಬಳಿ ಇವೆ.

(ಇ) ಜಾಗೃತಾ ಆಯೋಗದವರು ತನಿಖೆ ನಡೆಸಿದ್ದು ಇನ್ನು ತನಿಖೆ ವರದಿ ಬಂದಿಲ್ಲ.

## ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ

೨೩೨. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ಉತ್ತರಿಸುವರೇ ?

(ಅ) ಸರ್ಕಾರದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾಲೇಜುವಾರು ೧೯೮೨–೮೩ರಲ್ಲಿ ಸೇರಿಸಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು.

(ಆ) ಕಾಲೇಜುವಾರು ಮಾಹಿತಿ ಹಾಗೂ ಯಾವ ಯಾವ ಜಾತಿಯವರು ಎಷ್ಟೆಷ್ಟು ಜನರಿದ್ದಾರೆ ಎಂಬ ವಿವರಗಳನ್ನು ಒದಗಿಸುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.

(ಆ) ನಿಗದಿಪಡಿಸಿರುವ ಅಪ್ಲಿಕೇಷನ್ ಫಾರಂನಲ್ಲಿ ವಿದ್ಯಾರ್ಥಿಗಳು ಯಾವ ಜಾತಿಗೆ ಸೇರಿದ್ದಾರೆ ಎಂದು ತಿಳಿಸಬೇಕಾಗಿಲ್ಲದಿರುವುದರಿಂದ ಜಾತಿವಾರು ಸಂಖ್ಯೆ ಒದಗಿಸಲು ಸಾಧ್ಯವಿಲ್ಲ. ಆದರೆ ವಿವಿಧ ವರ್ಗಗಳಲ್ಲಿ ಕಾಲೇಜುವಾರು ಎಷ್ಟೆಷ್ಟು ವಿದ್ಯಾರ್ಥಿಗಳನ್ನು ಸೇರಿಸಿವೆ ಎಂದು ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.

**Statement showing the number of students admitted in Government Engineering Colleges during 1982-83.**

| Sl. No. | Name of the College | Total No. of students admitted | Out of column No.(3) No. of students belonging to | | | | | | | |
|---|---|---|---|---|---|---|---|---|---|---|
| | | | SC | ST | BCM | BCT | BT | BSG | GM | Others |
| 1. | B.D.T. College of Engineering Davangere | 210 | 36 | 8 | 30 | 15 | 8 | 22 | 84 | 7 (DF-3 Exs-3 & GOI-1) |
| 2. | S.K.S.J.T. Institute, Bangalore | 37 | 4 | 1 | 5 | 3 | 1 | 3 | 15 | 5(GOI-2, PS-1, DF-1 & Exs-1) |
| 3. | University Visveswaraiah College of Engineering, Bangalore. | 425 | 58 | 8 | 66 | 33 | 17 | 52 | 167 | 24(GOI-2, GOK-8, PS-4, DF-5 & Exs-5) |
| 4. | Karnataka Regional Engineering College, Surathkal | 125* | 26 | 10 | 10 | 8 | 3 | 10 | 46 | 12(DF-6 & Exs-5) |
| | | 797 | 124 | 27 | 111 | 59 | 29 | 87 | 312 | 48(GOI-5, GOK-8, PS-5, DF-15 & Exs-15) |

State Quota only